# ಕನ್ನಡ ಕಲಿಯುವ ಕುತೂಹಲ ಇದೆ

■ ರಾಘವೇಂದ್ರ ಕೆ.



**ದೃಷ್ಟಿ ಪ್ರಶಾಂತ ನಾಯಕ್ ಕಲರ್ಸ್ ಕನ್ನಡದ 'ಶ್ರೀ ಗಂಧದಗುಡಿ'ಯ ಮಹಿಮಾ**

◆ **ಮಹಿಮಾ ಸ್ಪಷ್ಟ ಕನ್ನಡ ಯಾವಾಗ ಮಾತನಾಡಬಹುದು?**

ಆಕೆ ಹೊರರಾಜ್ಯದ ಹುಡುಗಿ. ಮಹಿಮಾಗೆ ಸ್ಪಷ್ಟವಾಗಿ ಮಾತನಾಡಲು ಬರುವುದಿಲ್ಲ ನಿಜ. ಆದರೆ ಈಗ ಕಲಿಯುತ್ತಿದ್ದಾಳೆ. ಮೊದಲು ಹಿಂದಿಯನ್ನೇ ಮಾತನಾಡುತ್ತಿದ್ದಳು. ಕನ್ನಡ ನಾಡಿಗೆ ಬಂದ ಆಕೆ ಈಗ ಒಂದಿಷ್ಟು ಕನ್ನಡ ಪದಗಳನ್ನು ಕಲಿತಿದ್ದಾಳೆ. ಕನ್ನಡದ ವಾತಾವರಣಕ್ಕೆ ಹೊಂದಿಕೊಂಡಿದ್ದಾಳೆ. ಅಲ್ಲಿನ ಪರಿಸರದಿಂದ ಪ್ರಭಾವಿತಳಾಗಿ ಪುಟ್ಟ ಪುಟ್ಟ ವಾಕ್ಯಗಳನ್ನು ರಚಿಸುತ್ತಿದ್ದಾಳೆ. ಮುಂದೆ ಕನ್ನಡ ಹೇಗೆ ಕಲಿಯುತ್ತಾಳೆ ಎನ್ನುವುದು ಕುತೂಹಲ ನನಗೂ ಇದೆ. ಸ್ಪಷ್ಟ ಕನ್ನಡ ಕಲಿಯುತ್ತಾಳೆಯೋ ಇಲ್ಲವೋ ಎನ್ನುವುದು ಕಥೆಯ ಮೇಲೆ ನಿಂತಿದೆ.

◆ **ನಟನೆಯತ್ತ ಒಲವು ಮೂಡಿದ್ದು ಹೇಗೆ?**

ಮೂಲತಃ ಶಿರಸಿ ನಮ್ಮೂರು. ಅಲ್ಲೇ ಪಿಯು ಮುಗಿಸಿ ಪದವಿ ಓದಲು ಬೆಂಗಳೂರಿಗೆ ಬಂದೆ. ಇಲ್ಲಿ ಅಭಿನಯಕ್ಕೆ ಅವಕಾಶಗಳು ಸಿಗುತ್ತವೆ ಎನ್ನುವ ನಿರೀಕ್ಷೆ ಇತ್ತು. ಅಷ್ಟರಲ್ಲಾಗಲೇ ಮಾಡೆಲಿಂಗ್ ಮಾಡುತ್ತಿದ್ದೆ. ಅದಕ್ಕೆ ಮಹಾನಗರ ಸಹಕಾರಿ ಆಗಬಲ್ಲದು ಎಂದುಕೊಂಡಿದ್ದೆ. ಬೆಂಗಳೂರಿಗೆ ಬರುವ ಹೊತ್ತಿಗೆ ಎರಡು ಸಿನಿಮಾಗಳಿಗೆ ನಟಿಸುವ ಮಾತುಕತೆಯೂ ಆಗಿತ್ತು. ಮೊದಲಿನಿಂದಲೂ ಡಾನ್ಸ್, ಮಾಡೆಲಿಂಗ್ ಮಾಡಲು ನಮ್ಮ ಕುಟುಂಬದವರ ಪ್ರೋತ್ಸಾಹ ಇತ್ತು. ಶಿಕ್ಷಣದ ಜೊತೆ ಎಲ್ಲದನ್ನೂ ನಿಭಾಯಿಸಬಹುದು ಎನ್ನುವ ಅಭಿಲಾಷೆ ನನ್ನದಾಗಿತ್ತು.

◆ **ಬಾಲ್ಯದಲ್ಲಿಯೇ ಕಲೆಯ ಅಭಿರುಚಿಗೆ ಪ್ರೇರಣೆ ಸಿಕ್ಕಿದ್ದು ಹೇಗೆ?**

ಅಮ್ಮ ರೀನಾ. ಗಾಯಕಿ– ಡಾನ್ಸರ್, ಹವ್ಯಾಸಿ ರಂಗ ಕಲಾವಿದೆ. ಡೊಳ್ಳು ಕಟ್ಟಿಕೊಂಡು ಕುಣಿಯುತ್ತಿದ್ದರು. ಅದಾವುದನ್ನೂ ಅವರು ವೃತ್ತಿಯಾಗಿ ತೆಗೆದುಕೊಂಡಿರಲಿಲ್ಲ. ಶಿರಸಿಯಲ್ಲಿ ಜರುಗಿದ ಸುಗಮ ಸಂಗೀತ ಕಾರ್ಯಕ್ರಮಕ್ಕೆ ಖ್ಯಾತನಾಮ ಗಾಯಕರೂ ಬಂದಿದ್ದರು. ಅವರು ಅಮ್ಮನನ್ನು ಗುರುತಿಸಿದರು. ಆ ಪರಿಚಯದಿಂದ ಸಿನಿಮಾಗಳಲ್ಲಿ ನಟಿಸುವಂತೆ ಹೇಳಿದರು, ಆಡಿಷನ್‌ಗಳಿಗೂ ಕರೆದರು. ಸಣ್ಣಪುಟ್ಟ ಪಾತ್ರ ಆದರೆ ಮಾಡಬಹುದು ಎನ್ನುವ ಭಾವನೆ ಅವರಿಗೆ ಇತ್ತು. ಕಲಾತ್ಮಕ ಸಿನಿಮಾ ಒಂದಕ್ಕೆ ಅವಕಾಶವೂ ಬಂತು. ಅವರು ತಮ್ಮ ಮಕ್ಕಳನ್ನು ಕಳಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರು. ಅವರೇ ಪ್ರೇರಣೆಯನ್ನು ನನಗೆ ನೀಡಿದರು. ಕೋವಿಡ್ ಸಮಯದ ಲಾಕ್‌ಡೌನ್ ಸದುಪಯೋಗ ಮಾಡಿಕೊಳ್ಳಲು 'ಟೆಂಟ್ ಸಿನಿಮಾ' ಆನ್‌ಲೈನ್ ತರಗತಿಗೆ ಅವಕಾಶ ಕಲ್ಪಿಸಿತ್ತು. ಸ್ವಲ್ಪ ದಿನ ತರಬೇತಿಯನ್ನು ತೆಗೆದುಕೊಂಡೆ. ನಂತರ ಅಮ್ಮನ ನಿರ್ದೇಶನದಂತೆ ಆಡಿಷನ್ ನೀಡಲು ಆರಂಭಿಸಿದೆ. ಒಂದು ಸಿನಿಮಾಕ್ಕೆ ಆಡಿಷನ್ ನೀಡಿದರೆ ಆ ಪಾತ್ರಕ್ಕೆ ಅವಕಾಶ ಸಿಗಲಿಲ್ಲ. ಅದೇ ಸಿನಿಮಾದಲ್ಲಿ ಬೇರೆ ಪಾತ್ರಕ್ಕೆ ಅವಕಾಶ ಸಿಕ್ಕಿತು.

◆ **ಟೀವಿಯತ್ತ ಮುಖ ಮಾಡಿದ್ದು ಹೇಗೆ?**

ಇದುವರೆಗೆ ಯಾವ ಧಾರಾವಾಹಿಯನ್ನೂ ಮಾಡಿರಲಿಲ್ಲ. ಅಮ್ಮನಿಗೆ ವಾಹಿನಿ ಕಡೆಯಿಂದ ಕರೆ ಮಾಡಿ ನಿಮ್ಮ ಮಗಳಿಗೆ ಆಡಿಷನ್ನಿಗೆ ಕಳಿಸಿ ಎಂದರು. ಅಮ್ಮನ ಸೂಚನೆಯಂತೆ ಆಡಿಷನ್ ನೀಡುವ ಮನಸ್ಸು ಮಾಡಿದೆ. ಹೊಸ ರೀತಿಯ ಪಾತ್ರವನ್ನು ಇಲ್ಲಿ ಪರಿಚಯಿಸಿದ್ದರು. ರಾಜಸ್ಥಾನದ ಹುಡುಗಿ ಹಿಂದಿ ಮಾತಾಡಬೇಕು. ಆ ಪಾತ್ರಕ್ಕೆ ವೇಷಭೂಷಣ ಮಾತ್ರವಲ್ಲದೆ ಭಾಷೆ ಕೂಡ ಭಿನ್ನವಾಗಿ ಇರಬೇಕು ಎನ್ನುವ ಪ್ರಶ್ನೆ ಎದುರಾಯಿತು. ನಟನೆಯನ್ನು ಮಾಡಬಲ್ಲೆ ಎನ್ನುವ ನಂಬಿಕೆಯಿಂದ ಆಡಿಷನ್ ನೀಡಿದ್ದೆ. ಈ ರೀತಿಯ ಪಾತ್ರ ಭಿನ್ನತೆಯ ಕಾರಣಕ್ಕೆ ತುಂಬ ಇಷ್ಟ ಆಯಿತು. ವಿಶ್ವಾಸದಿಂದ ಅಭಿನಯವನ್ನು ಮಾಡಿದೆ. ಅಮ್ಮ ನನಗೆ ಈ ಪಾತ್ರವನ್ನು ಧಾರೆ ಎರೆದರು. ಜನ ನನ್ನನ್ನು ಗುರುತಿಸುವಂತೆ ಆಯಿತು.

◆ **ಮಹಿಮಾ ಪಾತ್ರವನ್ನು ನೀವು ಹೇಗೆ ಅನುಭವಿಸುತ್ತಿದ್ದೀರಿ?**

ಅಲ್ಲಿಯ ತನಕ ಸಿನಿಮಾದಲ್ಲೇ ಮಾಡಿದ್ದರೂ ಕನ್ನಡ ಹುಡುಗಿಯ ಪಾತ್ರವನ್ನೇ ನಿರ್ವಹಿಸಿದ್ದೆ. ಮಹಿಮಾ ನನಗೆ ತುಂಬ ಹತ್ತಿರದ ಪಾತ್ರ ಅನ್ನಿಸಿತು. ಹಿಂದಿ ಭಾಷೆಯೊಂದೇ ದೂರ ಅನ್ನಿಸಬಹುದು. ಅದು ನನಗೆ ಬಹುಬೇಗ ಹೊಂದಾಣಿಕೆ ಆಯಿತು. ಅದಕ್ಕೆ ಮೇಕಪ್ ಮಾಡಲೇಬೇಕು ಎಂದೇನೂ ಇಲ್ಲ. ಸ್ಕ್ರಿಪ್ಟ್ ಸಿಕ್ಕ ತಕ್ಷಣ ಆ ಪಾತ್ರ ನನ್ನನ್ನು ಮೈದುಂಬಿ ಬಿಡುತ್ತದೆ. ವೀಕ್ಷಕರಿಗೂ ಭಿನ್ನ ಪಾತ್ರ ಎಂದೇ ಅನ್ನಿಸುತ್ತದೆ. ನಾನು ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಜನರ ಮನಸಿಗೆ ಇದು ತಟ್ಟಿದೆ. ಇನ್ನೂ ಕೆಲವು ಕಂತುಗಳು ಮಾತ್ರ ಪ್ರಸಾರ ಆಗಿವೆ. ಆ ಪಾತ್ರಕ್ಕೆ ಮುಗ್ಧತೆ ಹೆಚ್ಚು ಬೇಕು. ಅದನ್ನು ಪಡೆಯುವುದು ಸ್ವಲ್ಪ ಕಷ್ಟ ಅನ್ನಿಸಿತು. ನನಗೆ ಆ ಮಟ್ಟದ ಶಕ್ತಿ ಇದೆ ಎಂದು ಅಂದುಕೊಂಡಿರಲಿಲ್ಲ. ಪಾತ್ರದಲ್ಲಿ ಮುಳುಗುವುದೇ ನಟನೆ ಎನ್ನುವುದು ನನ್ನ ನಂಬಿಕೆ. ಆ ಪಾತ್ರಕ್ಕೆ ಬೇಕಾದಂತಹ ಗುಣವನ್ನು ರೂಢಿಸಿಕೊಂಡೆ. ದೇಹಭಾಷೆ ಎಲ್ಲ ಹೊಂದಿಕೆ ಆಯಿತು. ಮನಸಾರೆ ಒಂದು ಪಾತ್ರವನ್ನು ಇಷ್ಟಪಟ್ಟರೆ ಹೆಚ್ಚಿನ ಪರಿಶ್ರಮ ಬೇಕಿಲ್ಲ ಎಂದು ಭಾವಿಸಿದ್ದೇನೆ. ಮಹಿಮಾ ಎನ್ನುವ ಪಾತ್ರವನ್ನು ಸಂತೋಷದಿಂದ ಅನುಭವಿಸಿದ್ದೇನೆ. ■

